# ದುರ್ಜನರ ಸಂಗ

ದಟ್ಟ ಕಾಡಿನ ಸಮೀಪವೇ ರೈತನೊಬ್ಬನ ಜಮೀನು ಇತ್ತು. ಪ್ರತಿ ವರ್ಷವೂ ಜಮೀನನ್ನು ಉತ್ತು, ಬಿತ್ತಿ ಬೆಳೆ ಬೆಳೆಯುತ್ತಿದ್ದನು. ಆ ಕಾಡಿನಲ್ಲಿ ಅಸಂಖ್ಯಾತ ಪಕ್ಷಿಗಳು ಇದ್ದವು. ಸಮೀಪದ ಜಮೀನಿಗೆ ಬಂದು ಬಿತ್ತಿದ್ದ ಬೀಜಗಳನ್ನು ಕೆದಕಿ ಕೆದಕಿ ಈಚೆಗೆ ತಂದು ತಿಂದು ಹಾಕುತ್ತಿದ್ದವು. ಇದರಿಂದಾಗಿ ರೈತನು ತುಂಬಾ ನಷ್ಟವನ್ನು ಹೊಂದುತ್ತಿದ್ದನು.

ಪಕ್ಷಿಗಳ ಸಂಗಡ ಸಾರಸ ಪಕ್ಷಿಯೊಂದು ಸ್ನೇಹದಿಂದಿದ್ದು ತನಗೆ ಅಗತ್ಯವಾದ ಕ್ರಿಮಿ– ಕೀಟಗಳನ್ನು ಅವುಗಳ ಸಹಾಯದಿಂದ ದೊರಕಿಸಿಕೊಳ್ಳುತ್ತಿತ್ತು. ಆದರೆ ಬಿತ್ತಿದ ಬೀಜಗಳನ್ನು ಮಾತ್ರ ಕೆದಕಿ ತಿನ್ನುತ್ತಿರಲಿಲ್ಲ. ರೈತನು ಹಕ್ಕಿಗಳ ಕಾಟವನ್ನು ತಪ್ಪಿಸಲು ಒಂದು ದಿನ ದೊಡ್ಡ ಬಲೆಯೊಂದನ್ನು ಜಮೀನಿನಲ್ಲಿ ಒಡ್ಡುಹಾಕಿ ಪಕ್ಷಿಗಳನ್ನು ಹಿಡಿಯಲು ಉದ್ಯುಕ್ತನಾದನು. ಹಾಗೆ ಮಾಡಿದಾಗ ಬೀಜವನ್ನು ತಿನ್ನಲೋಸುಗ ಬಂದ ಪಕ್ಷಿಗಳೆಲ್ಲವೂ ಬಲೆಯಲ್ಲಿ ಸಿಕ್ಕಿಬಿದ್ದವು. ಆ ಪಕ್ಷಿಗಳ ಸಮೂಹದಲ್ಲಿ ಸಾರಸ ಪಕ್ಷಿ ಅರ್ಥಾತ್ ಕೊಕ್ಕರೆಯೂ ಸಹ ಸಿಕ್ಕಿಬಿದ್ದಿತು!

ರೈತನು ಬಲೆಯನ್ನು ಬಿಚ್ಚಿ ಸಿಕ್ಕಿಬಿದ್ದ ಪಕ್ಷಿಗಳನ್ನು ಹಿಡಿಯಲು ಹೊರಟಾಗ ಸಾರಸ ಪಕ್ಷಿ ಹೀಗೆ ಹೇಳಿತು 'ನಾನು ನಿಮಗೆ ಅನ್ಯಾಯವನ್ನು ಮಾಡಿಲ್ಲ. ಬೀಜಗಳನ್ನು ಮುಟ್ಟಿಲ್ಲ. ನಾನು ಕಾಳುಗಳನ್ನು ಅಂದರೆ ಬಿತ್ತಿದ ಬೀಜಗಳನ್ನು ತಿನ್ನುವ ಪಕ್ಷಿಯಲ್ಲ. ನಾನು ಹೇಳಿ ಕೇಳಿ ಸಾರಸ ಪಕ್ಷಿ. ಏನಿದ್ದರೂ ಕ್ರಿಮಿ– ಕೀಟಗಳನ್ನು ತಿನ್ನುತ್ತೇನೆ. ಇದರಿಂದಾಗಿ ನಿಮ್ಮ ಜಮೀನಿಗೆ ನನ್ನಿಂದ ತೊಂದರೆ ಏನೂ ಇಲ್ಲ. ನನ್ನನ್ನು ದಯಮಾಡಿ ಬಿಟ್ಟುಬಿಡಿ' ಎಂದು ಬೇಡಿಕೊಂಡಿತು.

ರೈತನು ಸಾರಸ ಪಕ್ಷಿಯ ಮಾತನ್ನು ಕೇಳಿಸಿಕೊಂಡು 'ಅದೆಲ್ಲಾ ಆಗದ ಮಾತು. ಇತರ ಪಕ್ಷಿಗಳೊಡನೆ ಸ್ನೇಹದಿಂದ ಬಾಳಿ ಜಮೀನಿಗೆ ಅವುಗಳ ಜೊತೆ ಬಂದಿರುವುದರಿಂದ ನೀನೂ ತಪ್ಪಿತಸ್ಥನೇ ಸರಿ. ಅವುಗಳಿಗೆ ಸಿಗುವ ದಂಡನೆ ನಿನಗೂ ಸಹ ದೊರಕಬೇಕು. ಆ ಪಕ್ಷಿಗಳ ಸಂಗ ನೀನು ಮಾಡಿದ್ದು ಶತಾಪರಾಧ. ದಂಡನೆಗೆ ನೀನು ಅರ್ಹನೇ ಸರಿ' ಎಂದು ಹೇಳುತ್ತಾ ಶಿಕ್ಷಿಸಿದ.

**-ಎ.ಕೆ.ಪಟ್ಟಾಭಿ, ಬೆಂಗಳೂರು**





# ಪುಟ್ಟನ ಅನಿಸಿಕೆ

ಜೂನ್ ತಿಂಗಳು ಬಂತು ಅಂದರೆ
ಪುಟ್ಟನಿಗೆ ಬಲು ಬೇಸರ
ಶಾಲೆಗೆ ನಡೆದು ಹೋಗಲು
ಎನ್ನುವ ಚೀಲವೇ ಬಲು ಭಾರ

ಬೇಸಿಗೆ ರಜೆ ಏಕೆ ನಮಗೆ
ಬರೀ ಎರಡೇ ತಿಂಗಳು
ಆರು ತಿಂಗಳ ರಜೆ ಇದ್ದರೆ
ಅದುವೆ ಸಂತಸದ ದಿನಗಳು

ಏಳು ದಿನ ಬೇಡ ವಾರಕ್ಕೆ
ಮೂರೇ ದಿನಕ್ಕೆ ಇರಲಿ ಒಂದು ವಾರ
ಉಳಿದ ಮೂರು ದಿನದಲಿ
ಇರಲಿ ಒಂದು ಭಾನುವಾರ

ಬೆಳಗಿನ ಹತ್ತಕೆ ಹೊಡೆಯಲಿ
ಶಾಲೆ ಮೊದಲ ಗಂಟೆ
ಹನ್ನೆರಡರ ವೇಳೆಯಲಿ
ಹೊಟ್ಟೆಯ ಹಸಿವಿನ ತಂಟೆ

ಸಂಜೆಯ ನಾಲ್ಕರ ವೇಳೆಗೆ
ನೋಡಲೆ ಬೇಕು ಆಟದ ಬಯಲು
ಕಡೆಯ ಗಂಟೆ ಬಡಿದರೆ
ಮನೆಯ ಕಡೆ ದಾಪುಗಾಲು

**-ಶಿವನಾಪುರ ನರಸಿಂಹಮೂರ್ತಿ, ಕೆಂಗೇರಿ**